ಸಿಗಬೇಕಾದವರಿಗೆ ಸಿಗಬೇಕು. ಯಾರಿಗೆ ಸಿಗಬೇಕೋ ಅವರಿಗೇ ಸಿಗುವ ಹಾಗೆ, ನೀವು ಸೌಕರರನ್ನು ನೇಮಕ ಮಾಡಿಕೊಳ್ಳದಿದ್ದರೆ, ಆರ್ಥಿಕ ಮಿತವ್ಯಯ ಮಾಡಿಕೊಂಡರೆ ನಮ್ಮ ಹಣವೆಲ್ಲಾ ಅಪವ್ಯಯವಾಗುತ್ತದೆ.

ಶ್ರೀ ಎ. ನಾರಾಯಣಸ್ವಾಮಿ : – DPR ಆಗಿದೆ. ಅದಷ್ಟು ಬೇಗ ಈ ಒಂದು ಹುದ್ದೆಗಳನ್ನು ತುಂಬುವಂತಹ ಕೆಲಸ ಮಾಡುತ್ತೇವೆ.

ಶ್ರೀ ಹೆಚ್. ಹಾಲಪ್ಪ : – ತಾಲ್ಲೂಕು ಮಟ್ಟದಲ್ಲಿ ಏನು ಮಾಡಿದ್ದೀರಿ ?

ಶ್ರೀ ಎ. ನಾರಾಯಣಸ್ವಾಮಿ : – ಈಗಾಗಲೇ ತಾಲ್ಲೂಕು ಮಟ್ಟದಲ್ಲಿ incharge ಕೊಟ್ಟಿದ್ದೇವೆ. ಆದರೂ ಸಹ ಇರುವ ವ್ಯವಸ್ಥೆ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ಇಲಾಖೆಯನ್ನು ಯಾವ ರೀತಿ ಸದೃಢ ಮಾಡಬೇಕೋ ಆ ನಿಟ್ಟಿನಲ್ಲಿ ಎಲ್ಲಾ ಪತ್ರ ವ್ಯವಹಾರಗಳನ್ನು ಮಾಡಿ ಅದನ್ನು ತುಂಬುತ್ತೇವೆ.

ಅಧ್ಯಕ್ಷರು : – ಮಾನ್ಯ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ್ ನರಿಬೋಳ್, ಹಾಜರಿಲ್ಲ. ಮಾನ್ಯ ಎಂ. ಶ್ರೀನಿವಾಸ್‌ರವರು, ಹಾಜರಿಲ್ಲ. ಮಾನ್ಯ ಇ. ತುಕರಾಮ್‌ರವರು ಪ್ರಶ್ನೆ ಕೇಳುವುದು.

ಸಂಡೂರು ಬಸ್ ಡಿಪೋದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ

830

ಶ್ರೀ ತುಕಾರಾಮ್. ಇ.

ಅ) ಸಂಡೂರು ಪಟ್ಟಣದಲ್ಲಿ ಹೊಸದಾಗಿ ಸಾರಿಗೆ ಡಿಪೋ ಉದ್ಘಾಟನೆಗೊಂಡು ಎರಡು ವರ್ಷಗಳಾದರೂ ಅಲ್ಲಿ ಮೂಲಭೂತ ಸೌಕರ್ಯವಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಡಿಪೋ ಒಳಗೆ ಡಾಂಬರೀಕರಣ, ನೀರು ಮುಂತಾದವು)

ಆ) ಹಾಗಿದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹೊಸದಾಗಿ ಡಿಪೋ ಪ್ರಾರಂಭವಾದಾಗಿನಿಂದ ಹೊಸ ಬಸ್ಸುಗಳ ನಿಲುಗಡೆಗೆ ವ್ಯವಸ್ಥೆ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ ಬಸ್ಸುಗಳನ್ನು ಹಂಚಿಕೆ ಮಾಡಲು ತೊಂದರೆಗಳೇನು ?

ಶ್ರೀ ಆರ್. ಅಶೋಕ್
(ಮಾನ್ಯ ಉಪಮುಖ್ಯಮಂತ್ರಿಗಳು, ಗೃಹ ಹಾಗೂ ಸಾರಿಗೆ ಸಚಿವರು)

ಅ) ಬಸ್ ಘಟಕ್ಕೆ ಅವಶ್ಯಕ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಇತ್ಯಾದಿಗಳನ್ನು ಕಲ್ಪಿಸಲಾಗಿರುತ್ತದೆ.

ಸದರಿ ಘಟಕದ ಆವರಣ ಗಟ್ಟಿ ಮಣ್ಣಿನಿಂದ ಕೂಡಿರದೇ ಇರುವುದರಿಂದ ಡಾಂಬರೀಕರಣದ ಬದಲಾಗಿ ಕಾಂಕ್ರಿಟ್ ಅಳವಡಿಸುವುದಕ್ಕೆ ಯೋಚಿಸಲಾಗಿರುತ್ತದೆ.

ಆ) ಹೊಸದಾಗಿ ಬಸ್ ಘಟಕ ನಿರ್ಮಿಸುವಾಗ ಬಸ್‌ಗಳ ನಿಲುಗಡೆಗೆ ಅವಕಾಶ ಕಲ್ಪಿಸಲಾಗಿರುತ್ತದೆ.

ಸಂಡೂರ ಘಟಕ್ಕೆ 29 ಅನುಸೂಚಿಗಳನ್ನು ಕಾರ್ಯಚರಣೆ ಮಾಡಲು ಒಟ್ಟು 33 ಬಸ್ಸುಗಳನ್ನು ಒದಗಿಸಲಾಗಿರುತ್ತದೆ. ಸದರಿ ಘಟಕದಲ್ಲಿ ಬಸ್ಸುಗಳ ಕೊರತೆ ಇರುವುದಿಲ್ಲ.

ಶ್ರೀ ಇ. ತುಕರಾಮ್ : – ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸಚಿವರೆ ಒಂದು 2011 ರಲ್ಲಿ ನಮ್ಮ ಡಿಪೋ ಮಾಡಿಕೊಟ್ಟಿದ್ದಾರೆ. ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಜೊತೆಗೆ ಅಲ್ಲಿ ತಕ್ಷಣವೇ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಅವತ್ತು ನಾನು ಮನವಿಯನ್ನು ಮಾಡಿದ್ದೆ. ಕೇಳಿದಾಗ ಅವರು ಮಾಡಿಸಿಕೊಡುತ್ತೇನೆ ಎಂದು ಹೇಳಿದ್ದರು. ಮುಖ್ಯವಾಗಿ ಆ ಡಿಪೋದಲ್ಲಿ ಏನಾಗಿದೆ ಎಂದರೆ, ಮಣ್ಣಿನ ಜಾ ಇರುವುದರಿಂದ ಅಲ್ಲಿ ಧೂಳು ಜಾಸ್ತಿ ಬರುತ್ತಿದೆ. ಅಲ್ಲಿ ಪಕ್ಕದಲ್ಲೇ, ಜೂನಿಯರ್ ಕಾಲೇಜು, ಸೀನಿಯರ್ ಕಾಲೇಜು, ಹೈಸ್ಕೂಲ್‌ಗಳು ನಡೆಯುತ್ತಿವೆ. ಇದರಿಂದಾಗಿ ಅವುಗಳಿಗೆ ತೊಂದರೆಯಾಗುತ್ತಿದೆ. ತಮ್ಮ ಗಮನಕ್ಕೆ ತರುವುದೇನೆಂದರೆ, ಅಲ್ಲಿ Private Water tanker ತೆಗೆದುಕೊಂಡು ನಾನು ಅಲ್ಲಿ water spread ಮಾಡಿಸುತ್ತಿದ್ದೇನೆ. ನನ್ನ ಮನವಿ ಇಷ್ಟೆ. ಅದಷ್ಟು ಬೇಗ ಅದನ್ನು cc ಮಾಡಿಕೊಟ್ಟರೆ, ಕಾಲೇಜುಗಳಿಗೆ ಸಹಾಯವಾಗುತ್ತದೆ. ಏಕೆಂದರೆ ಅಲ್ಲಿನ ಸಿಬ್ಬಂದಿಗಳೂ ಕೂಡ ಅಲ್ಲಿ ಕೆಲಸ ಮಾಡುವುದಕ್ಕಾಗುತ್ತಿಲ್ಲ ಆ ರೀತಿ ತೊಂದರೆ ಆಗುತ್ತಿದೆ. ಅದೊಂದು ಮಾಡಿಕೊಡಬೇಕು. ಜೊತೆಗೆ ಅಲ್ಲಿ ಏನಾಗಿದೆ ಎಂದರೆ, ಅಲ್ಲಿ ಎರಡು ದಿವಸಕ್ಕೊಂದು ಸಾರಿ ನೀರು ಬಿಡುತ್ತಿದ್ದಾರೆ. ನೀರಿನ ವ್ಯವಸ್ಥೆ ಇದೆ ನಾನೇ ಪುರಸಭೆಯಿಂದ connection ಮಾಡಿಸಿಕೊಟ್ಟಿದ್ದೇನೆ. ಅಲ್ಲಿ ನೀರಿನ ವ್ಯವಸ್ಥೆ ಇದೆ. ನಾನೇ ಪುರಸಭೆಯ ವತಿಯಿಂದ ಮಾಡಿಸಿಕೊಟ್ಟಿದ್ದೇನೆ. ಅವರಿಗೆ ಒಂದು

ದಿನ ಆದ ಮೇಲೆ ಇನ್ನೊಂದು ದಿನ ನೀರನ್ನು ಕೊಡುತ್ತಿದ್ದಾರೆ. ಈ ರೀತಿ ಮಾಡಿರುವುದರಿಂದ ಅವರಿಗೆ ಕುಡಿಯುವ ನೀರಿಗಾಗಿ ಬಹಳ problem ಆಗುತ್ತಿದೆ. ನನ್ನದು ಒಂದು ಬೋರ್ ಇದೆ. ಅದಕ್ಕೆ ಒಂದು ಅಕ್ಯಾಗಾರ್ಡ್‌ಗೆ ಸುಮಾರು 10 ರಿಂದ 14 ಸಾವಿರ ರೂಪಾಯಿಗಳಾಗುತ್ತದೆ ಅದನ್ನು ಮಾಡಿಸಿಕೊಟ್ಟರೆ ಅವರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ತಾವು ನನಗೆ ಬಸ್ಸುಗಳನ್ನು ಕೊಟ್ಟಿದ್ದೀರಿ ಇಲ್ಲವೆಂದು ಹೇಳುತ್ತಿಲ್ಲ. ತಾವು ಒಂದು assurance ಮಾಡಿಕೊಟ್ಟಿದ್ದೀರಿ. ಮಾನ್ಯ ಉದಾಸಿಯವರು ರೋಡ್ ಮಾಡಿಕೊಟ್ಟರೆ ತುಕಾರಾಮ್‌ರವರೆ ತಮಗೆ ಖಂಡಿತವಾಗಿಯೂ ಬಸ್ ಕೊಡಿಸುತ್ತೇನೆಂದು ಹೇಳಿದ್ದರು. ಈಗ ನಮಗೆ ಉದಾಸಿ ಸಾಹೇಬರು ರೋಡ್‌ಅನ್ನು ಮಾಡಿಸಿಕೊಟ್ಟಿದ್ದಾರೆ. ಅಲ್ಲಿ ಕೊರತೆ ಏನಾಗಿದೆ ಎಂದರೆ ನಂದಿಹಳ್ಳಿಗೆ ಆಮೇಲೆ ಲೋಕಲ್ ಹಳ್ಳಿಗೆ ತೊಂದರೆಯಾಗಿದೆ. 8 ಬಸ್‌ಗಳ ವ್ಯವಸ್ಥೆಯನ್ನು ಮಾಡಿಕೊಟ್ಟರೆ ನಮ್ಮಲ್ಲಿ ವಿದ್ಯಾಭ್ಯಾಸ ಮಾಡುವಂತಹ ಮಕ್ಕಳಿಗೆ ಹಾಗೂ ಪಿ.ಜಿ. ಸೆಂಟರ್‌ಗಳಿಗೆ ಓಡಾಡುವವರಿಗೆ ಅನುಕೂಲವಾಗುತ್ತದೆ. ತಾವು ಇದನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ (ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು) : – ಮಾನ್ಯ ಅಧ್ಯಕ್ಷರೆ, ಈಗಾಗಲೇ ಅಲ್ಲಿ ಹೊಸ ಬಸ್ ಡಿಪೋ ಅನ್ನು ಉದ್ಘಾಟನೆ ಮಾಡಿದ್ದೇವೆ. ಅಲ್ಲಿ ಶೌಚಾಲಯದ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ ಇದೆ. ಅಲ್ಲಿ ನೀರಿನ ವ್ಯವಸ್ಥೆಯು ಎರಡು ದಿನಕ್ಕೆ ಒಂದು ಸಾರಿ ಕೊಡುತ್ತಿದ್ದಾರೆ ಅದಕ್ಕೆ ಸಮಸ್ಯೆ ಇದೆ. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನು ಕ್ರಮ ಕೈಗೊಳ್ಳುತ್ತೇನೆ. ಮೊದಲು ಆ ಒಂದು ಭಾಗಕ್ಕೆ ಡಾಂಬರೀಕರಣವಾಗಬೇಕೆಂದು ಪ್ರಪೋಸಲ್ ಅನ್ನು ಕೊಟ್ಟಿದ್ದೀರಿ. ಅಲ್ಲಿ ದೂಳು ಮಣ್ಣು ಇರುವುದರಿಂದ ಡಾಂಬರೀಕರಣ ಹಾಕುವುದಕ್ಕೆ ಆಗುತ್ತಿಲ್ಲ. ಆದಕಾರಣ ಅಲ್ಲಿ ಕಾಂಕ್ರಿಟ್ ಮಾಡಬೇಕೆನ್ನುವಂತಹ proprosal ರೆಡಿ ಮಾಡುತ್ತಿದ್ದೇವೆ. ಇದಾದ ಮೇಲೆ ಡಾ. ನಂಜುಂಡಪ್ಪ ವರದಿಯಲ್ಲಿ ಹೇಳಿದ ಹಾಗೆ ಅದಕ್ಕೆ ಹಣವೂ ಬರುತ್ತದೆ. ಅದರಲ್ಲಿ ಆ ಕೆಲಸವನ್ನು ಮಾಡುತ್ತೇವೆ. ಎರಡನೇಯದಾಗಿ ಹೇಳುವುದಾದರೆ ಎಷ್ಟು ಅವಶ್ಯಕತೆ ಇದೆಯೋ ಸುಮಾರು 33 ಹೊಸದಾಗಿ ಬಸ್ಸುಗಳು ಈಗಾಗಲೇ ಕೊಟ್ಟಿದ್ದೇವೆ. ಅಲ್ಲಿ ಎಲ್ಲಾ ಒಳ್ಳೆಯ ಬಸ್ಸುಗಳನ್ನು ಕೊಟ್ಟಿದ್ದೇವೆ. ಆದರೆ ಅಲ್ಲಿ ರೋಡ್ ಸರಿಯಾಗಿರುವುದಿಲ್ಲ. ರೋಡ್ ಸರಿಯಾಗುತ್ತದೆ ಎಂದು ತಾವು ಹೇಳಿದ್ದೀರಿ. ಅದು ಆದ ತಕ್ಷಣವೆ

immediate ಆಗಿ ಆ ಹಳ್ಳಿಗಳಲ್ಲಿ ಜನರು ಒಡಾಡುವುದಕ್ಕೆ ಎಷ್ಟು ಬಸ್ಸುಗಳ ಅವಶ್ಯಕತೆ ಇದೆಯೋ ಅದಕ್ಕೆ ವ್ಯವಸ್ಥೆ ಮಾಡುವಂತಹ ಕ್ರಮಕ್ಕೈಗೊಳ್ಳುತ್ತೇವೆ.

ಅನರ್ಹಗೊಂಡ ಬಸ್ಸುಗಳು

46 : 863

ಶ್ರೀ ಅಪ್ಪಾಜಿ ಚನ್ನಬಸವರಾಜು ಶಂಕರರಾವ್ ನಾಡಗೌಡ

ಅ) ಬಿಜಾಪೂರ ಜಿಲ್ಲೆಯಲ್ಲಿ ಅನರ್ಹಗೊಂಡ ಬಸ್‌ಗಳ ಸಂಖ್ಯೆ ಎಷ್ಟು (ಘಟಕವಾರು ವಿವರ ನೀಡುವುದು)

ಆ) ಮುದ್ದೆಬಿಹಾಳ ಮತ್ತು ತಾಳಿಕೋಟೆ ಡಿಪೋದಲ್ಲಿ ಅನರ್ಹಗೊಂಡ ಬಸ್‌ಗಳೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಇ) ಹಾಗಾದರೆ ಈ ಡಿಪೋಗಳಿಗೆ ಹೊಸ ಬಸ್‌ಗಳನ್ನು ಒದಗಿಸುವ ಆಲೋಚನೆ ಸರ್ಕಾರದ ಮುಂದಿದೆಯೇ ? (ಸಂಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಆರ್. ಅಶೋಕ (ಮಾನ್ಯ ಉಪ ಮುಖ್ಯಮಂತ್ರಿಗಳು, ಗೃಹ ಮತ್ತು ಸಾರಿಗೆ ಸಚಿವರು)

ಅ) ಬಿಜಾಪೂರ ಜಿಲ್ಲೆಯಲ್ಲಿ ಒಟ್ಟು 235 ಅನರ್ಹಗೊಂಡ ಬಸ್ಸುಗಳಿರುತ್ತದೆ. ಘಟಕವಾರು ವಿವರಗಳು ಈ ಕೆಳಗಿನಂತಿವೆ.

ಕ್ರ.ಸಂ.	ಘಟಕಗಳು	ಅನರ್ಹಗೊಂಡ ಬಸ್ಸುಗಳು
1.	ಬಿಜಾಪೂರ	1
2.	ಬಿಜಾಪೂರ	2
3.	ಇಂಡಿ	
4.	ಸಿಂದಗಿ	
5.	ಮುದ್ದೇಬಿಹಾಳ	
6.	ತಾಳಿಕೋಟೆ	
7.	ಬ.ಬಾಗೇವಾಡಿ	
	ಒಟ್ಟು	**235**

ಆ) ಹೌದು.